<u>ದಿನಾಂಕಃ **12-04-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಆರ್ ಐ ಕೆ ರವರಿಂದಃ</u>

6. ನಾನು ಆರೋಪಿಗೆ ನೀಡಿದ 4 ಚಕ್‌ಗಳು ಮೊತ್ತ ಆರೋಪಿಯ ಖಾತೆಗೆ ಜಮೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ23-01-2017 ರಂದು ನಾನು ಆರೋಪಿಗೆ ರೂ.2 ಲಕ್ಷ ರೂಪಾಯಿಗಳನು ಚಕಗಳ ಮುಖಾಂತರ ದಿಃ 04-02-2017 ರಂದು ರೂ.6 ಲಕ್ಷ ಆರೋಪಿಗೆ ಚಕ್ ನ ಮುಖಾಂತರ ದಿಃ 14-02-2017 ರಂದು ಆರೋಪಿಗೆ ರೂ.3 ಲಕ್ಷ ರೂಪಾಯಿಗಳನ್ನು ದಿಃ 21-02-2017 ರಂದು ಆರೋಪಿಗೆ ರೂ.2 ಲಕ್ಷ ರೂಪಾಯಿಗಳನು ಚಕಗಳ ಮುಖಾಂತರ ಹಣ ನೀಡಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸಾಕ್ಷಿಯು ಸದರಿ ದಿನಾಂಕಗಳಂದು ನಾನು ನೀಡಿದ ಚಕಗಳು ಆರೋಪಿಗೆ ಖಾತೆಗೆ ಜಮಾ ಆಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ಮೇಲಿನ ಚಕಗಳನ್ನು ಆರೋಪಿಗೆ ನಗಧೀಕರಣ ಮಾಡಿಕೊಳ್ಳುವ 2 ದಿನಗಳ ಹಿಂದೆ ನೀಡಿರುತ್ತೇನೆ. ನಾನು ಆರೋಪಿಗೆ ಯಾವ ದಿನಾಂಕದಂದು ಚಕ್ಕು ನೀಡಿರುತ್ತೇನೆ ಎನ್ನುವ ಕುರಿತು ದಿನಾಂಕ ನಮೂದು ಮಾಡಿ ನೀಡಿರುತ್ತೇನೆ ಎಂದರೆ ಸರಿ.

7. ನಾನು ನನ್ನ ದೂರಿನಲ್ಲಿ , ವಕೀಲರ ಮೂಲಕ ಆರೋಪಿಗೆ ಕಳುಹಿಸಿದ ನೋಟೀಸನಲ್ಲಿ ಹಾಗೂ ನನ್ನ ಸಾಕ್ಷಿ ವಿಚಾರಣೆಯ ಪ್ರಮಾಣ ಪತ್ರದಲ್ಲಿ 4 ಚಕ್ಕಗಳ ಮೂಲಕ ಕ್ರಮವಾಗಿ ದಿನಾಂಕಃ 23-01-2017 ರಂದು ರೂ.2 ಲಕ್ಷ, ದಿಃ 04-02-2017 ರಂದು ರೂ.6 ಲಕ್ಷ, ದಿಃ 14-02-2017 ರಂದು ರೂ.3 ಲಕ್ಷ ಹಾಗೂ ದಿಃ 21-02-2017 ರಂದು ರೂ.2 ಲಕ್ಷ ಹಣವನ್ನು ಚಕ್‌ಗಳ ಮುಖಾಂತರ ಆರೋಪಿಗೆ ನೀಡಿರುತ್ತೇನೆ ಎಂದು ಬೆರೆಸಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಮೇಲಿನ ದಿನಾಂಕಗಳಂದು ನಾನು ನೀಡಿದ 4 ಚಕಗಳನ್ನು ಆರೋಪಿ ಹಣ ನಗಧೀಕರಣಗೊಳಿಸಿ ಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ನೀಡಿದ 4 ಚಕ್ ಗಳ ಮೊತ್ತಗಳು ಆರೋಪಿಯ ಖಾತೆಗೆ ಜಮೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.13 ಲಕ್ಷ ಹಣವನ್ನು 4 ಚಕ್‌ಗಳ ಮುಖಾಂತರ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಾನು ಗೋಕಾಕದಲ್ಲಿ ಇರುವ ಏಕದಂತ ಮತ್ತು ಕಲ್ಯಾಣ ಪೈನಾನ್ಸ ನಲ್ಲಿ ನಾನು ಭಾಗಿದಾರನಾಗಿರುತ್ತೇನೆ ಎಂದರೆ ಸರಿ. ಸದರಿ ಪೈನಾನ್ಸಗಳಿಂದ ಸಾರ್ವಜನಿಕರಿಗೆ ಸಾಲ ನೀಡುವ ಸಮಯದಲ್ಲಿ ಭಧ್ರತೆಗಾಗಿ ಖಾಲಿ ಚಕ್‌ಗಳ ಮೇಲೆ ಸಹಿ ಪಡೆದುಕೊಂಡು ಸಾಲ ನೀಡಿರುತ್ತೇವೆ

ಎಂದರೆ ಸರಿಯಲ್ಲ. ನಾವು ಸಾಲ ನೀಡುವಾಗ ಗ್ರಾಹಕರ ಕಡೆಯಿಂದ ಭದ್ರತೆಗಾಗಿ ಚಕ್‌ಗಳನ್ನು ಪಡೆದುಕೊಳ್ಳುತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಆರೋಪಿ ನಮ್ಮ ಕಲ್ಯಾಣ ಪೈನಾನ್ಸನಲ್ಲಿ ಸಾಲ ಪಡೆದಿದ್ದ ಎಂದರೆ ಸರಿ. ಈ ಪ್ರಕರಣದ ನಿಪಿ-1 ರ ಖಾಲಿ ಚಕ್‌ನ ಮೇಲೆ ಆರೋಪಿಯ ಸಹಿ ಪಡೆದುಕೊಂಡು ಕಲ್ಯಾಣ ಪೈನಾನ್ಸನಲ್ಲಿ ಆರೋಪಿಗೆ ಸಾಲ ನೀಡಿದ್ದೇವು ಎಂದರೆ ಸರಿಯಲ್ಲ. ಆರೋಪಿಯ ಕಡೆಯಿಂದ ಆ ಸಮಯದಲ್ಲಿ ಈ ಪ್ರಕಣದ ನಿಪಿ-1 ರ ಚಕ್‌ನ್ನು ಪಡೆದುಕೊಂಡಿದ್ದರು ಸಹ ನಾನು ಪಡೆದುಕೊಂಡಿಲ್ಲ ಎಂದು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಕಲ್ಯಾಣ ಪೈನಾನ್ಸನಲ್ಲಿ ಪಡೆದುಕೊಂಡ ಸಾಲವನ್ನು ಸಂಪೂರ್ಣ ಮರು ಸಂದಾಯ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನಮ್ಮ ಪೈನಾನ್ಸನಲ್ಲಿ ಎಷ್ಟು ಜನ ಸಾಲ ಪಡೆದಿರುತ್ತಾರೆ ಹಾಗೂ ಎಷ್ಟು ಜನ ಪಡೆದ ಸಾಲವನ್ನು ಮರು ಸಂದಾಯ ಮಾಡಿರುತ್ತಾರೆ ಎಂಬುವ ಕುರಿತು ಮೀಟಿಂಗನಲ್ಲಿ ಚರ್ಚೆ ಆಗುತ್ತದೆ ಎಂದರೆ ಸರಿ. ಆರೋಪಿ ನಮ್ಮ ಪೈನಾನ್ಸನಿಂದ ಪಡೆದ ಸಾಲವನ್ನು ಸಂಪೂರ್ಣ ಮರು ಸಂದಾಯ ಮಾಡಿ ಆದ ನಂತರ ಸಾಲ ಪಡೆಯುವಾಗ ಭದ್ರತೆಗಾಗಿ ಪಡೆದುಕೊಂಡ ಖಾಲಿ ಚಕ್‌ನ್ನು ಮರಳಿ ಕೊಡಲು ಆರೋಪಿ ನನಗೆ ಕೇಳಿದ್ದ ಎಂದರೆ ಸರಿಯಲ್ಲ. ನಿಪಿ-1 ರ ಚಕ್‌ನ್ನು ಉಮಾ ಮೆಡಿಕಲ್ ಏಜನ್ಸಿ ವ್ಯವಹಾರಕ್ಕೆ ಸಂಬಂಧಿಸಿದಂತೆ ದುರುಪಯೋಗ ಪಡೆಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

10. ಆರೋಪಿಯ ವಿರುದ್ಧ ಉಮಾ ಮೆಡಿಕಲ್ ಏಜನ್ಸಿ ಸಲುವಾಗಿ ರಾಮದುರ್ಗ ನ್ಯಾಯಾಲಯದಲ್ಲಿ ನಾನು ದಿವಾಣಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಶಿವಲಿಂಗೇಶ್ವರ ದುಂಡಪ್ಪ ಜಿನರಾಳ ನನ್ನ ಸಹೋದರ ಎಂದರೆ ಸರಿ. ಸದರಿ ನನ್ನ ಸಹೋದರನ ಕಡೆಯಿಂದ ಆರೋಪಿಯ ಮಾವ ದುಂಡಯ್ಯ ಪಕೀರಯ್ಯಾ ಹಿರೇಮಠರವರ ವಿರುದ್ಧ ರಾಮದುರ್ಗ ನ್ಯಾಯಾಲಯದಲ್ಲಿ ನಾನು ದಿವಾಣಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನನ್ನ ತಮ್ಮ ಶಿವಲಿಂಗೇಶ್ವರ ಮತ್ತು ದುಂಡಯ್ಯ ಪಕೀರಯ್ಯಾ ಹಿರೇಮಠರವರ ಮಧ್ಯ ಆದ ವ್ಯವಹಾರಕ್ಕೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರಬಹುದು. ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ತಮ್ಮ ಬೇರೆ ಬೇರೆ ವಾಸವಾಗಿರುತ್ತೇವೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.